**ಚಾ.ಸಾಃ 10, ಫ್ರಾ.ಸಾಃ 05**

**ಸಾಕ್ಷಿಯನ್ನು ದಿನಾಂಕಃ 19-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಂತರ ಅಮಾನತ್ತುಪಡಿಸಿಕೊಂಡಿದ್ದ ಸ್ವತ್ತುಗಳನ್ನು ಠಾಣಾ ಪಿಎಫ್ ನಲ್ಲಿ ನಮೂದಿಸಿರುತ್ತೇನೆ. ಆರೋಪಿತರು ಘಟನಾ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದರಿಂದ ಆರೋಪಿತರನ್ನು ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ.

ದಿನಾಂಕ 04-08-2020 ರಂದು ಆರೋಪಿತರನ್ನು ಚಂದಾವರದ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ಆರೋಪಿತರು ಕಾಣಿಕೆ ಹುಂಡಿಯನ್ನು ಕಳುವು ಮಾಡಿದ ಸ್ಥಳವನ್ನು ತೋರಿಸಿದ್ದು ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು 05-20 ರಿಂದ 05-30 ರ ಸಮಯದಲ್ಲಿ ತಯಾರಿಸಿರುತ್ತೇನೆ.

ತನಿಖೆಯನ್ನು ಮುಂದುವರಿಸಿ ಆರೋಪಿತರು ಈ ಪ್ರಕರಣ ಅಲ್ಲದೇ ಇತರೇ ಪ್ರಕರಣದಲ್ಲಿಯೂ ಭಾಗಿಯಾಗಿದ್ದರಿಂದ ನಿಪಿ-8 ರ ಪಂಚನಾಮೆಯನ್ನು ಮುಂದುವರಿಸಿದ್ದು ಆರೋಪಿತರು ತಮ್ಮ ಸ್ವ ಖುಷಿ ಹೇಳಿಕೆಯಂತೆ ವಿವಿಧ ಸ್ಥಳಗಳಿಗೆ ಕರೆದುಕೊಂಡು ಹೋಗಿದ್ದು ಸದರಿ ಸ್ಥಳಗಳಲ್ಲಿ ನಿಪಿ-8 ರ ಪಂಚನಾಮೆಯನ್ನು ಮುಂದುವರಿಸಿ ಸ್ಥಳ ಪಂಚನಾಮೆ ತಯಾರಿಸಿ ಸದರಿ ಸ್ಥಳಗಳಲ್ಲಿ ಫೋಟೋ ತೆಗೆಸಿರುತ್ತೇನೆ. ಆ ಕಾಲಕ್ಕೆ ಸ್ಥಳಗಳಲ್ಲಿ ತೆಗೆದ 6 ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ-9 ರಿಂದ 14 ಎಂದು ಗುರುತಿಸಲಾಯಿತು. ಮುಮಾ-1 ರಿಂದ 12 ನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರ ಹೇಳಿಕೆಯಂತೆ ಪಂಚನಾಮೆಯಲ್ಲಿ ಅಮಾನತ್ತುಪಡಿಸಿಕೊಂಡಿದ್ದ ಕಬ್ಬಿಣದ ರಾಡನ್ನು ಈಗ ನೋಡುತ್ತಿದ್ದು ಅದನ್ನು ಮುಮಾ-13 ಎಂದು ಗುರುತಿಸಲಾಗಿದೆ. ಕಾರು ಮತ್ತು ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ- ಆರೋಪಿಗಳ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**